ಮಗುವಿನ ಜೊತೆಗೆ ತಂದೆ–ತಾಯಿಯೂ ಹುಟ್ಟುತ್ತಾರೆ ಎನ್ನುವ ಜನಪ್ರಿಯ ಮಾತಿದೆ. ಈ ಮಾತು ಭಾವನಾತ್ಮಕವಾಗಿ ಮಾತ್ರವಲ್ಲ, ಜೀವನನಿರ್ವಹಣೆಯ ದೃಷ್ಟಿಯಿಂದಲೂ ನಿಜ. ಮಗುವೊಂದು ತಂದೆ–ತಾಯಿಯ ಜೊತೆಗೆ ಇಡೀ ಕುಟುಂಬದ ದೈನಿಕವನ್ನೇ ಬದಲಿಸಿಬಿಡುತ್ತದೆ. ತನಗೆ ಏನಾಗುತ್ತಿದೆ ಎಂಬುದರ ಅರಿವಿಲ್ಲದ ಮಗುವನ್ನು ಅರಿತುಕೊಳ್ಳುವುದು ಪ್ರತಿದಿನದ, ಪ್ರತಿಕ್ಷಣದ ಸವಾಲೂ ಹೌದು. ಆ ಅರಿವಿನ ಕೊರತೆಯಿಂದಲೇ ಎಷ್ಟೋ ಎಷ್ಟೋ ಅವಘಡಗಳು ನಡೆಯುವುದಿದೆ. ಆರು ವರ್ಷದವರೆಗಿನ ಮಕ್ಕಳ ಬೆಳವಣಿಗೆ, ಅವರ ಗ್ರಹಿಕೆಗಳು, ಸಾಮಾನ್ಯವಾಗಿ ಎದುರಾಗುವ ಅನಾರೋಗ್ಯದ ಸಮಸ್ಯೆಗಳನ್ನು ತುಂಬ ಸರಳವೂ ಸಚಿತ್ರವೂ ಆಗಿ ಓದುಗರ ಮುಂದಿಡುವ ಈ ಲೇಖನ, ಎಲ್ಲ ಪೋಷಕರೂ ಓದಲೇಬೇಕಾದ ಕೈಪಿಡಿ.

# ಪೇರೆಂಟಿಂಗ್ ಗೈಡ್

■ ಡಾ. ಕೆ.ಬಿ. ರಂಗಸ್ವಾಮಿ

ಲೇಖಕರು ಮಕ್ಕಳ ತಜ್ಞ ವೈದ್ಯರು ಹಾಗೂ ತುಮಕೂರಿನ ‘ಶ್ರೀ ಸಿದ್ಧಾರ್ಥ ವೈದ್ಯಕೀಯ ಮಹಾವಿದ್ಯಾಲಯ’ದ ಮಕ್ಕಳ ವಿಭಾಗದಲ್ಲಿ ಪ್ರಾಧ್ಯಾಪಕರು

ಚಿತ್ರಗಳು: ಮಂಜುನಾಥ್ ಭಟ್

## ಆರಂಭದ ವರ್ಷಗಳ ಕಾಳಜಿ; ಮಗುವಿನ ಮುಂದಿನ ಬದುಕಿಗೆ ಭದ್ರ ಬುನಾದಿ